ಕವಿತೆ




## ಆರ್. ದಿಲೀಪ್ ಕುಮಾರ್

ಕಲೆ: ಕುಮಾರ್ ಕಾಟೇನಹಳ್ಳಿ


# ಏಳು ನೆರಳುಗಳು

1.
ನೀರ ಮೇಲೆ ನೆರಳು
ನೆರಳ ಮೇಲೆ ನೀರು

ಅದಲು ಬದಲು
ನೋಡಿದರೆ

ಕಾವ್ಯ!

ನಡುವ ಎಳೆ
ನೆರಳು

2.
ಬೆಕ್ಕಿನಾಟ ಬೆಳಕಿನೊಡನೆ
ನೆರಳ ಅರಸುತ್ತ
ಬಾಲ
ಬುಗುರಿ ಸುತ್ತಿದರೆ

ಆಹಾ!

ಒಳಗೆ ಹೊರಗೆ
ನೆರಳು

3.
ಜಾಲಂಧರದ ತುಂಬ
ಕಿಡಿಗಳ

ಒಳಬರುವ ಹೊರಹೋಗುವ
ನೆರಳು ಬೆಳಕಿನ ಕವಾಯತ್ತು
ವಿಗ್ರಹದ ಕಣ್ಣಂಚಿನಲಿ ಕಾಣುವಂತೆ
ಬಿಡಿಸಿ ಓಡುವ ಗಾಳಿ

ಎದುರು ಕುಳಿತವರ ಕಣ್ಣಂಚಲ್ಲಿ
ನೆರಳ ನಂದಾದೀಪ

4.
ಕಪ್ಪು ರಸ್ತೆಯಲಿ ನೆರಳ ಓಟ

ಸೂರ್ಯ ನಾಚಿ ನೀರಾಗಿ
ಮೋಡ ಅವನ ಮುಖಮುಚ್ಚಿ
ನಗೆಯ ಮಳೆ ಸುರಿಸಿ
ನೆರಳ ಅಳಿಸಿದಾಗ

ಮೇಲೆ ಏಳು ನೆರಳು ಬೆಂಡಾಗಿ
ನೆಲ ಆಗಸವ ಮುಟ್ಟಿದ ಹಾಗೆ
ಕಪ್ಪು ಕ್ಯಾನ್ವಾಸ್ ರಸ್ತೆಯಲಿ
ಬಣ್ಣದ ನೆರಳು

